ನಂಬರ್.	ಮಿಲಿಟರಿ ಹುದ್ದೆಯ ಹೆಸರು.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ	ವಿಸ್ತೀರ್ಣ. ಉತ್ತರ ದಕ್ಷಿಣ	ವಿವರಣೆ.	ಯಾವ ಕೆಲಸಕ್ಕಾಗಿರುತ್ತೆ.	ಪರಾ.
			ಅಡಿ.	ಅಡಿ.			
10		ಹೊನ್ನಯ್ಯ ..	16	25	ಡಿಟೋ 3 ಡಿಟೋ ಹಂಚಿನದು ಡಿಟೋ 3 ಡಿಟೋ ವೆರಾಂಡಾ	"ಶಾಮಿಯಾನಗಲ್ಲಿಯನ್ನು ಅಗಲಮಾಡಿ ಬಿಡಾಯಿಸುವುದಕ್ಕೆ"	ಪೂರ್ವಕ್ಕೆ-ಕಣುವಯ್ಯನ ಮನೆ, ಪಶ್ಚಿಮಕ್ಕೆ ಕವನಯ್ಯನ ಮನೆ, ದಕ್ಷಿಣಕ್ಕೆ ಓಣೀ, ಉತ್ತರಕ್ಕೆ ಮುದ್ದಪ್ಪನ ಮನೆ.
11		ಕಣುವಯ್ಯ ..	30	24	ಜವಿಾನು		ಪೂರ್ವಕ್ಕೆ-ಜೀವಣರಾಯರ ಕೆರೇದಾರಿ, ಪಶ್ಚಿಮಕ್ಕೆ ಹೊನ್ನಯ್ಯನ ಮನೆ, ದಕ್ಷಿಣಕ್ಕೆ ಓಣೀ, ಉತ್ತರಕ್ಕೆ ಮುದ್ದಪ್ಪನ ಮನೆ.

ತಾರೀಖು 9ನೇ ಡಿಶಂಬರ್ 1887.

ನಂ. 148.—ಮೇಜರ್ ಎ. ಹೆಚ್. ಮೆಕ್ಕಿರ್ಟಯರ್ ಮತ್ತು ಮೆ॥ ಮಹಮ್ಮದ್‌ಅಲ್ಲೀಖಾ ಬಹದೂರ್‌ಯವರು, ಶ್ರೀಮನ್ ಮಹಾರಾಜಾ ಸರ್ಕಾರದವರ ಸರಕೀಟ್ ಸವಾರೀಸಂಗಡ ಕೆಲಸದಮೇಲೆ ಇರುವ ಕಾಲದಲ್ಲಿ ಇದರಡೀಬರುವ ಹಂಗಾಮಿ ಮೊಕರರಾತಿಗಳು ಹುಕ್ಕುಂ ಮಾಡಲ್ಪಟ್ಟಿರುತವೆ:—

ಮೆ॥ ಯಚ್. ಬಿ. ಕ್ಲರ್ಕ್‌ಯವರು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮತ್ತ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು.

ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರು, ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಮತ್ತ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡತಕ್ಕದ್ದು. ಕೂಡ್ಲೇ ಕೆಲಸದಮೇಲೆ ಹೋಗತಕ್ಕದ್ದು.

ನಂ. 149.—ಇದರಡೀಕಂಡ ಅಸಿಸ್ಟೆಂಟ್ ಕಮ್ಮಿಷನರುಗಳ ವರ್ಗಾವರ್ಗಿಯು ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಮೆ॥ ಜೆ. ಡಬ್ಳಿಯು. ನೈಟ್ ಯವರು, ಶಿವಮೊಗ್ಗೆಯಿಂದ ಮೈಸೂರಿಗೆ, 1888ನೇ ಇಸವಿ ಮಾರ್ಚೀ 31ನೇ ಮುಕ್ತುಂ ತರುವಾಯ ಮೊಕರರ್ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಮೆ॥ ಹೆಚ್. ವಿ. ನಂಜುಂಡಯ್ಯನವರು ಮೈಸೂರಿಂದ ಶಿವಮೊಗ್ಗೆಗೆ, ಮೆ॥ ನೈಟ್ ಯವರಿಗೆ ಚಾರ್ಜ್ ಪಪ್ಪಿಸಿದ ತರುವಾಯ ಮೊಕರರ್ ಕೆಲಸದ ಮೇಲೆ ಹೋಗತಕ್ಕದ್ದು.

ಬಿಮೋಜೀಬ್ ಹುಕ್ಕುಂ,
ಆರ್. ವಿಜಯಿೂಂದ್ರರಾವ್,
ಚೀಫ್ ಸೆಕ್ರಿಟೆರಿ.

ವಿದ್ಯಾಭ್ಯಾಸದ ಇಲಾಖೆ.

ಸ್ಯ 1887ನೇ ಇಸವಿ ಡಿಶಂಬರ್ ತಾರೀಖು 8.

ಕನ್ನಡ ಭಾಷೆಗಾಗಿ ಬೆಳ್ಳಿಯ ಬಟ್ಟು.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ವೆಸ್ಲಿಯ್ಯ ಮತ್ತು ಲಂಡ್ಸ್ ಮಿಷ್ಟ್ ಹೈ ಸ್ಕೂಲ್‌ಗಳ ಕನ್ನಡ ಮುನಷಿ ಮೆ॥ ರಾ॥ ಹೊ. ವೆಂಕಟರಾಮಾಶಾಸ್ತ್ರಿ ಎಂಬವರಿಂದ ಸ್ಯ 1888ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ಉಪಾಧ್ಯಾಯರ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವಂಥಾವನಿಗೆ 12 ರೂಪಾಯಿ ಬೆಲೆಯುಳ್ಳ ಬಂದು ಬೆಳ್ಳಿಯ ಬಟ್ಟು ಕೊಡಲ್ಪಡುತ್ತೆ.

ಸ್ ೧೮೮೭ನೇ ಇಸವಿ ಡಿಸಂಬರ್ ತಾರೀಖು ೧.

ಸಂಸ್ಕೃತ ಭಾಷೆಗಾಗಿ ಪುಸ್ತಕಗಳ ಬಹುಮಾ ನ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಸೆಂಟ್ರಲ್‌ಕಾಲೀಜ್ ಸಂಸ್ಕೃತ ಪಂಡಿತರಾವ ಮ|| ರಾ|| ವಿಶ್ವೇಶ್ವರ ಶಾಸ್ತ್ರಿಯವರಿಂದ ಸ್ ೧೮೮೮ನೇ ಇಸವಿ ಫಿಬ್ರುವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ಪರೀಕ್ಷೆಯ ಸಂಸ್ಕೃತ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವಂಥಾ ವಿದ್ಯಾರ್ಥಿಗೆ, ಗುರುಬಾಲ ಪ್ರಬೋಧಿಕೆ, ಮತ್ತು ಸಿದ್ಧಾಂತ ಕೌಮುದೀ ಎಂಬ ಪುಸ್ತಕಗಳು ಕೊಡಲ್ಪಡುತ್ತವೆ.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರೆಟರಿ.